# ರಾಜ್ಯೋತ್ಸವ ಸಂಭ್ರಮಕ್ಕೆ ರಾಯಣ್ಣ

ಗಾಂಧಿನಗರದಲ್ಲಿ ಕನ್ನಡ ಮಾಸದ ಸಂಭ್ರಮ ಜೋರಾಗಿದೆ. ರಾಜ್ಯೋತ್ಸವದ ಸಂಭ್ರಮಕ್ಕೆ 'ಸಂಗೊಳ್ಳಿ ರಾಯಣ್ಣ' ಜೊತೆಯಾಗುವುದು ಹೆಚ್ಚೂ ಕಡಿಮೆ ಸ್ಪಷ್ಟವಾಗಿದೆ. ಕನ್ನಡ ಚಿತ್ರರಂಗದ ಅತ್ಯಧಿಕ ಬಜೆಟ್‌ನ ಚಿತ್ರ ಎನ್ನುವ ಅಗ್ಗಳಿಕೆಯ 'ಸಂಗೊಳ್ಳಿ ರಾಯಣ್ಣ' ಕನ್ನಡದ ಹೆಮ್ಮೆ ಸಾರುವ ಚಿತ್ರ ಎಂದೂ ಬಿಂಬಿತವಾಗಿದೆ.

ರಾಯಣ್ಣನ ಕಡು ಅಭಿಮಾನಿ ಆನಂದ ಅಪ್ಪುಗೋಳ 'ಸಂಗೊಳ್ಳಿ ರಾಯಣ್ಣ' ನಿರ್ಮಾಪಕರು. ಅವರ ಪಾಲಿಗಿದು ಜೀವನದ ಕನಸು. ನಿರ್ದೇಶಕ ನಾಗಣ್ಣ ಅವರಿಗೂ ರಾಯಣ್ಣ ಮಹತ್ವಾಕಾಂಕ್ಷೆಯ ಚಿತ್ರ. ಈ ಇಬ್ಬರ ಕನಸುಗಳನ್ನು ರಾಯಣ್ಣನ ಪಾತ್ರದ ಮೂಲಕ ನಾಯಕ ನಟ ದರ್ಶನ್ ಪೋಷಿಸಿದ್ದಾರೆ. ರಾಯಣ್ಣನ ಪಾತ್ರವನ್ನವರು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆಂದರೆ, ಈ ಚಿತ್ರದ ಕಾರಣದಿಂದಾಗಿ ತಮ್ಮ ಸ್ವಂತ ನಿರ್ಮಾಣದ ಚಿತ್ರದ ಶೂಟಿಂಗ್ ಅನ್ನೇ ಮುಂದೂಡಿದ್ದಾರೆ. ಸದ್ಯಕ್ಕಂತೂ ರಾಯಣ್ಣನ ಜಪದಲ್ಲಿರುವ ಅವರು ಬೇರೆ ಸಿನಿಮಾದ ಬಗ್ಗೆ ಚಕಾರ ಎತ್ತುತ್ತಿಲ್ಲ.

ಶಿವರಾಜ್‌ಕುಮಾರ್ ಅಭಿನಯದ 'ಗಂಡುಗಲಿ ಕುಮಾರರಾಮ' ಕೂಡ ಅದ್ದೂರಿ ಪ್ರಚಾರದೊಂದಿಗೆ ತೆರೆ ಕಂಡಿತ್ತು. ಆದರೆ, ಚಿತ್ರ ದಯನೀಯ ಸೋಲು ಕಂಡಿತ್ತು. ಅನಂತರ ಮಹತ್ವಾಕಾಂಕ್ಷೆಯ ಐತಿಹಾಸಿಕ ಚಿತ್ರಗಳ ನಿರ್ಮಾಣಕ್ಕೆ ಯಾವ ನಿರ್ಮಾಪಕರೂ ಆಸಕ್ತಿ ತೋರಿಸಿರಲಿಲ್ಲ. ಐತಿಹಾಸಿಕ ಚಿತ್ರಗಳ ಶಕೆ ಕನ್ನಡದಲ್ಲಿ ಮುಗಿದೇ ಹೋಯಿತು ಎನ್ನುವ ಸಂದರ್ಭದಲ್ಲಿ 'ಸಂಗೊಳ್ಳಿ ರಾಯಣ್ಣ' ರೂಪುಗೊಂಡಿದೆ.



ಸಂಗೊಳ್ಳಿ ರಾಯಣ್ಣ ಗೆದ್ದರೆ ಮತ್ತಷ್ಟು ಐತಿಹಾಸಿಕ ಚಿತ್ರಗಳ ಕನಸಿಗೆ ನೀರೆರೆಯಬಹುದು. ಕನ್ನಡ ಚಿತ್ರಗಳಲ್ಲಿ 'ಕನ್ನಡತನ' ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಇಂಥ ಚಿತ್ರಗಳ ಪ್ರಯತ್ನಕ್ಕೇ ವಿಶೇಷ ಮಹತ್ವವಿದೆ.

# ಶರಣು ಶರಣಯ್ಯ...



'ನನ್ನ ಪಾಲಿಗೆ ಈ ಐವತ್ತು ದಿನಗಳು ಐದು ನೂರು ದಿನಗಳಿದ್ದಂತೆ'. ಶರಣ್ ಮಾತುಗಳಲ್ಲಿ ಸಂತಸವೂ ಭಾವುಕತೆಯೂ ಮಿಳಿತಗೊಂಡಿತ್ತು. ಅದು, 'ರ್‍ಯಾಂಬೊ' ಚಿತ್ರ ಐವತ್ತು ದಿನ ಪೂರೈಸಿದ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಸಂತೋಷ ಕೂಟ, ಎಲ್ಲೆಲ್ಲೂ ಸಂತೋಷವೇ... ಎನ್ನುವಂತಹ ಪರಿಸರ. ಚಿತ್ರದ ಗೆಲುವಿಗೆ ಕಾರಣರಾದ ಸಕಲರಿಗೂ ಶರಣ್ ಶರಣು ಶರಣೆಂದರು.

'ನಿರ್ಮಾಪಕನಾಗಿ ಹಾಗೂ ನಾಯಕನಾಗಿ ನನಗಿದು ಮೊದಲ ಅನುಭವ. ಸಿನಿಮಾ ಗೆದ್ದಿರುವುದರಿಂದ ನಿರಾಳವಾಗಿದ್ದೇನೆ. ಖುಷಿಗಾಗಿ ಮಾಡಿದ ಚಿತ್ರವಿದು. ಆದರೆ, ಅನೇಕ ಸಂದರ್ಭಗಳಲ್ಲಿ ನಮಗೆ ಖುಷಿ ಕೊಟ್ಟಿದ್ದು ಹಣಕಾಸಿನ ಲೆಕ್ಕಾಚಾರದಲ್ಲಿ ಯಶಸ್ವಿ ಆಗಿರುವುದಿಲ್ಲ. ಒಳ್ಳೆಯ ಕಥೆಯ ಚಿತ್ರಗಳು ಸೋಲುವುದಿಲ್ಲ ಎನ್ನುವ ನನ್ನ ನಂಬಿಕೆಯನ್ನು ರ್‍ಯಾಂಬೊ ಮತ್ತಷ್ಟು ದೃಢಪಡಿಸಿದೆ' ಎನ್ನುವ ಶರಣ್ ಮಾತಿಗೆ, ಇಡೀ ಚಿತ್ರತಂಡವೇ ತಲೆದೂಗಿದಂತಿತ್ತು.

ಸಂತೋಷ ಕೂಟದ ಕೇಂದ್ರ ಬಿಂದು ಶರಣ್ ಅವರ ಅಕ್ಕ ಶ್ರುತಿ. 'ನನ್ನ ತಮ್ಮ ವಿಶ್ವಕಪ್ ಗೆದ್ದಷ್ಟು ಖುಷಿಯಾಗಿದೆ' ಎಂದು ಬೀಗಿದ ಶ್ರುತಿ, 'ನನ್ನ 23 ವರ್ಷಗಳ ಸಿನಿಮಾ ಬದುಕಿನಲ್ಲಿ ಇದೊಂದು ಅವಿಸ್ಮರಣೀಯ ಆಹ್ವಾನ' ಎಂದರು. ನಿರ್ದೇಶಕ ಎಂ.ಎಸ್. ಶ್ರೀನಾಥ್, ಹಿರಿಯ ಕಲಾವಿದ ಉಮೇಶ್, ತಬಲಾ ನಾಣಿ, ನವೀನ್ ಕೃಷ್ಣ, ಸುಧೀರ್ ತರುಣ್, ಛಾಯಾಗ್ರಾಹಕ ಕೃಷ್ಣ ಸೇರಿದಂತೆ ಅನೇಕರು ಶರಣ್ ಬಳಗದ ಸಂತಸದಲ್ಲಿ ಭಾಗಿಯಾಗಿದ್ದರು. 'ರ್‍ಯಾಂಬೊ' ಕುಟುಂಬದ ಎಲ್ಲ ಸದಸ್ಯರಿಗೆ ಶರಣ್ ಗೆಲುವಿನ ಸ್ಮರಣಿಕೆಗಳನ್ನು ನೀಡಿದ್ದು ಕಾರ್ಯಕ್ರಮದ ಇನ್ನೊಂದು ವಿಶೇಷ.

■ ರಘು